**CC 181/2017**

**ಪ್ರಧಾನ ಸಿವಿಲ್ ನ್ಯಾಯಧೀಶರು ಮತ್ತು ಪ್ರ.ದ.ನ್ಯಾದಂ. ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್ 181/2017**

**ಸಿ ಡಬ್ಲೂಃ 7**

**ಪಿ ಡಬ್ಲೂಃ 7**

| | |
|---|---|
| ಸಾಕ್ಷಿಯ ಹೆಸರು - | ಪಿ ರಾಜೇಶ |
| ತಂದೆಯ ಹೆಸರು - | ಚಿತ್ರಪ್ಪ |
| ವಯಸ್ಸು - | 41 ವರ್ಷಗಳು |
| ಉದ್ಯೋಗ - | ಹೆಚ್ ಸಿ -300 , ಡಿ ಎಸ್ ಬಿ ಘಟಕ ಹೊಸಪೇಟೆ |
| ವಾಸಸ್ಥಳ - | ಹೊಸಪೇಟೆ |

**ಸಾಕ್ಷಿಯನ್ನು ದಿನಾಂಕಃ 18-04-2023 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ- ಎ. ಪಿ. ಪಿ. ಅವರಿಂದ**

ನಾನು 2013 ರಿಂದ 2022 ರವರೆಗೆ ಹೊಸಪೇಟೆ ಪಟ್ಟಣ ಪೋಲಿಸ್ ಠಾಣೆಯಲ್ಲಿ ಸಿಪಿಸಿ - 99 ಆಗಿ ಠಾಣಾ ಬಹರಗಾರ ಜೊತೆಗೆ ಕಂಪ್ಯೂಟರ್ ಆಪರೇಟರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ನಾನು ಠಾಣೆಯಲ್ಲಿ ಪೋಲಿಸ ಐ ಟಿ ಯಲ್ಲಿ ಮಾಹಿತಿಯನ್ನು ತುಂಬುವ ಕೆಲಸ ಮಾಡುತ್ತೇನೆ. ದಿಃ 20-11-2014 ರಂದು ಹೊಸಪೇಟೆಯ 18 ನೇ ವಾರ್ಡ ವಾಸಿಯಾದ ಯಾನೂಸ್ ಇವರ ಮಗನಾದ ಆರೋಪಿ ಇಜಾಜ್ ಅಹ್ಮದ ಇವರು ಪಾಸ್ ಪೋರ್ಟ ಸಲುವಾಗಿ ಅರ್ಜಿ ಸಲ್ಲಿಸಿದ್ದು ಅದರ ಪರಿಶೀಲನೆಗಾಗಿ ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಲು ದೂರವಾಣಿ ಕರೆಯನ್ನು ಠಾಣೆ ಮುಖಾಂತರ ತಿಳಿಸಿರುತ್ತಾರೆ.

ನಂತರ ಇವರು ಠಾಣೆಗೆ ಹಾಜರಾಗಿ ದಾಖಲಾತಿಗಳನ್ನು ಹಾಜರುಪಡಿಸಿದರು. ನಂತರ ಅವರ ದಾಖಲಾತಿಗಳನ್ನು ಚಾಸಾ -1 ರವರು ನೋಡಿ ಪರಿಶೀಲಿಸಿರುತ್ತಾರೆ.

**CC 181/2017**

**ಸಿ ಡಬ್ಲೂಃ 7**

**ಪಿ ಡಬ್ಲೂಃ 7**

ದಾಖಲೆಗಳನ್ನು ಪರಿಶೀಲಿಸಿದಾಗ ಆರೋಪಿಯ ಆಧಾರ ಕಾರ್ಡ ನಲ್ಲಿ ಎಜಾಸ್ ಅಹ್ಮದ್ ಮತ್ತು ರೇಷನ್ ಕಾರ್ಡ ನಲ್ಲಿ ಎಜಾಜ್ ಅಹ್ಮದ್ ಇತ್ತು. ಈ ಬಗ್ಗೆ ಕೇಳಿದಾಗ ಆರೋಪಿ ಸರಿ ಪಡಿಸಿಕೊಳ್ಳುತ್ತೇನೆ ಅಂತಾ ಹೇಳಿರುತ್ತಾರೆ.

ನಂತರ ಅಕ್ಕ ಪಕ್ಕದ ಮನೆಯವರಾದ ಚಾಸಾ -4, 5 ರವರು ಅವರನ್ನು ವಿಚಾರಿಸಿದಾಗ ಆರೋಪಿ 10 ವರ್ಷಗಳಿಂದ ಪರಿಚಯ ಇದ್ದು ಅವರು ಮಟನ್ ವ್ಯಾಪಾರ ಮಾಡಿಕೊಂಡು ಇದ್ದಾರೆ ಅಂತಾ ತಿಳಿಸಿರುತ್ತಾರೆ. ಈ ಬಗ್ಗೆ ನಾನು ಚಾಸಾ -1 ರವರ ಮುಂದೆ ಚಾಸಾ -4 ಮತ್ತು 5 ರವರ ಹೇಳಿಕೆ ಚಾಸಾ -6 ರವರು ಪಡೆದುಕೊಂಡಿರುತ್ತಾರೆ. ಚಾಸಾ -1 ರವರು ಇದರ ಬಗ್ಗೆ ವಿಚಾರಿಸಿದಾಗ ಹೆಸರು ಮತ್ತು ಜನ್ಮ ದಿನಾಂಕ ತಪ್ಪಾಗಿದೆ ಅದನ್ನು ಸರಿ ಪಡಿಸಿಕೊಳ್ಳುತ್ತೇನೆ ಅಂತಾ ತಿಳಿಸಿದರು. ಅದಕ್ಕೆ ಚಾಸಾ -1 ರವರು ಅನುಮೋದನೆ ನೀಡಿದರು.

ದಿಃ 21-11-2014 ರಂದು ಚಾಸಾ -1 ರವರ ಅನುಮೋದನೆ ಮೇರೆಗೆ ಪೋಲಿಸ ಐ ಟಿ ಯಲ್ಲಿ ಅನುಮೋದನೆ ಮಾಡಿದ ಬಗ್ಗೆ ಅಪಲೋಡ್ ಮಾಡಿ ಹಾರ್ಡ್ ಕಾಪಿ ತೆಗೆದು ಬಳ್ಳಾರಿ ಡಿ ಎಸ್ ಪಿ ಕಚೇರಿಗೆ ಕಳುಹಿಸಿದೆನು. ದಿಃ 01-06-2016 ರಂದು ಎಜಾಜ್ ಅಹ್ಮದ್ ಅವರು ಆತನ ಅಣ್ಣನ ಹೆಸರಿನಲ್ಲಿ ದಾಖಲಾತಿ ನೀಡಿ ತನ್ನ ಪೋಟೋ ನೀಡಿ ಅವರ ಅಣ್ಣನಂತೆ ಸಹಿ ಮಾಡಿ ಪಾಸ್ ಪೋರ್ಟ ಪಡೆದಿರುತ್ತಾರೆ ಎಸ್ ಪಿ ಕಚೇರಿಯಿಂದ ಮೆಮೋ ಹಾಕಿದರು ಈ ಬಗ್ಗೆ ಪ್ರಕರಣ ದಾಖಲಿಸಿ ಎಂದಾಗ ಪ್ರಕರಣ ದಾಖಲಾಯಿತು. ಈ ಬಗ್ಗೆ ನಾನು ಹೇಳಿಕೆ ನೀಡಿದ್ದೇನೆ. ಪಾಸ್ ಪೋರ್ಟ ಪರಿಶೀಲನೆಗಾಗಿ ಬಂದ ವ್ಯಕ್ತಿ ಈಗ ನ್ಯಾಯಾಲಯದ ಮುಂದೆ ಆರೋಪಿಯಾಗಿದ್ದಾನೆ.

**CC 181/2017**

**ಸಿ ಡಬ್ಲೂಃ 7**

**ಪಿ ಡಬ್ಲೂಃ 7**

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**

(**ಈ** ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಯಾವುದೇ ಸಕಾರಣ ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.)

**ಮರು ವಿಚಾರಣೆ- ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.